10-00. A. M.

Papers laid on the Table

SRI R. S. PATIL (Minister for Labour and Excise) Sir on behalf of Minister for Revenue I beg to lay notification No. RD 101 EST 79, dated 2nd May, 1979.

Regarding exemption of stamp duties in respect of instrument executed by Anjuman-e-Islam, Hubli.

Under Section 9 (2) of the Karnatake Stamp Act, 1957.

Sir I beg to lay -

(i) Notification No. FD 8PES 79 dated 20th April, 1979.

The Karnataka Excise (Lease of the Right of Retail Vend of Liquors) (Amendment) Rules, 1979.

(ii) Notification No. FD 8 PES 79 dated 30th April, 1979.

Amendment of Rule 3 of the Karnataka Excise (Lease of Right of Retail Vend of Liquers) Rules 1969.

Under Sub-Section (4) of Section 71 of the Karnataka Excise Act, 1965.

SRI V.M. KUSNOOR (Minister for Co-operation) Sir on behalf of (Minister for Transport and Tourism) I beg to lay :—

Notification No. HD 23 TMI 78, dated 21 April 1979.

Inter State Transport supplemental Reciprocal agreement between states of Tamil Nadu and Karnataka.

Under section 3 (3) of the Karnataka Motor Vehicle Taxation Act, 1957.

SRI S. BANGARAPPA (Minister for Public Works) Sir on behalf of Minister for Municipal Administration I beg to lay,

(i) Notification No. HUD 31 TML 79, dated 25th April 1979 Extending the period of supersession of city Municipal Council, Gulbarga.

Under sub-section 5 of Section 316 of the Karnataka Municipalities Act, 1964.

(ii) Annual Financial Statement (Budget) of the Bangalore Water Supply & Sewerage Board, Bangalore for the year 1979-80.

Under Section (3) of Section 17 of the Bangalore Water Supply Sewerage Board Act, 1964.

SRI V.M. Kushnoor (Minister for Co-operation)

Sir. I beg. to lay :—

Notification No. RDC 51 CEP 79 dated 28th March 1979.

Application of section 30 of the Karnataka Co-operative Societies Act, 1959 with modification to Galaginakatti collection Co-operative Farming Society, Galaginakatti.

U der Rule 130 of the Karnataka Co-operative Societies Act, 9.

MR. SPEAKER: All Papers are laid.

BUDGET ESTIMATES FOR 1979-80

Demands for Grants

Demand No. 27 and 28 (Debate Continued)

† ಶ್ರೀ ಎಂ. ಮಲ್ಲಪ್ಪ (ಜನಾರೋಗ್ಯ ಮತ್ತು ಕುಟುಂಬ ಕಲ್ಯಾಣ ಶಾಖೆಗಳ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಆರೋಗ್ಯ ಇಲಾಖೆಯ ಬೇಡಿಕೆಗಳ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾನ್ಯ ಸದಸ್ಯರು ಅಮೂಲ್ಯವಾದ ಸಲಹೆಗಳನ್ನು ನೀಡಿದ್ದಾರೆ. ಅದಕ್ಕಾಗಿ ಸನ್ಮಾನ್ಯ ಸದಸ್ಯರೆಲ್ಲರಿಗೂ ಕೂಡನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಿಜಕ್ಕೂ ಚರ್ಚೆಯಲ್ಲಿ ಅತ್ಯಮೂಲ್ಯವಾದ ಸಲಹೆಗಳನ್ನು ಮಾನ್ಯ ಸದಸ್ಯರು ನೀಡಿದ್ದಾರೆ. ಆರೋಗ್ಯ ಇಲಾಖೆ ಇನ್ನೂ ಹೆಚ್ಚು ದಕ್ಷತೆಯಿಂದ, ಹೆಚ್ಚು ಪ್ರಮಾಣಿಕತೆಯಿಂದ ಕೆಲಸ ಮಾಡಬೇಕು ಎನ್ನುವ ಬಗ್ಗೆ ಒಳ್ಳೆಯ ಸಲಹೆಗಳು ಬಂದಿವೆ. ಆ ಅಮೂಲ್ಯ ಸಲಹೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ಸನ್ಮಾನ್ಯ ಸದಸ್ಯರೆಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ಸಂತೋಷವೇನೆಂದರೆ ಮಾನ್ಯ ಆರೋಗ್ಯ ಮಂತ್ರಿಗಳಿಗೆ ಹೋದ ವರ್ಷಕ್ಕಿಂತ ಈ ವರ್ಷ ಬಹಳ ಆರೋಗ್ಯವಂತರಾಗಿದ್ದಾರೆ. ಅದೇ ರೀತಿ ಈ ಆರೋಗ್ಯ ಇಲಾಖೆಯನ್ನು ಚೆನ್ನಾಗಿ ಮಾಡಬೇಕು.

ಶ್ರೀ ಎಂ. ಮಲ್ಲಪ್ಪ.—ವಿರೋಧ ಪಕ್ಷದ ನಾಯಕರ ಬಗ್ಗೆ ನನಗೆ ಬಹಳ ಕಳಕಳಿ ಇತ್ತು. ಅವರು ಈ ಸಭೆಗೆ ಬಂದಾಗ ಅವರ ಆರೋಗ್ಯ ಉತ್ತಮವಾಗಬೇಕೆಂದು ನನ್ನ ಮನಸ್ಸಿನಲ್ಲಿ ಮೂಡಿ ಬರುತ್ತಿತ್ತು. ಆಗ ಅವರ ಆರೋಗ್ಯವನ್ನು ನೋಡಿದಾಗ ಉತ್ತಮಗೊಂಡಂತೆ ಕಾಣುತ್ತಿದೆ. ಅವರ ಆರೋಗ್ಯ ಇನ್ನೂ ಹೆಚ್ಚಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಸದಸ್ಯರು ಪರಸ್ಪರ ಒಬ್ಬರಿಗೊಬ್ಬರು ಅಭಿನಂದಿಸಿಕೊಳ್ಳುತ್ತಿದ್ದಾರೆ.

ಶ್ರೀ ಎಂ. ಮಲ್ಲಪ್ಪ.—ಎಲ್ಲ ಸದಸ್ಯರಿಗೂ ಆರೋಗ್ಯ ಇಲಾಖೆಗೆ ಒದಗಿಸಿರುವ ಹಣ ಹೆಚ್ಚಾಗಬೇಕು, ಬೇಡಿಕೆಗಳು ಅತಿ ಶೀಘ್ರವಾಗಿ ಪೂರೈಕೆಯಾಗಬೇಕು ಎನ್ನುತಕ್ಕಂತಹ ಆತಂಕವನ್ನು ನಾನು ಕೇಳಿದ್ದೇನೆ. ನಿಜವಾಗಿಯೂ ಕೂಡ ಮೊನ್ನೆ ದೆಪಲಿಯಲ್ಲಿ ಆರೋಗ್ಯ ಮಂತ್ರಿಗಳ ಸಭೆ ನಡೆದಗ, ಎಲ್ಲಾ ಮಂತ್ರಿಗಳೂ ಕೂಡ ಯಾವ ಸರ್ಕಾರವೇ ಆಗಲಿ, ಸರ್ಕಾರದ ಆಯವ್ಯಯದಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತಾರೆಯೋ ಅದರ ಕನಿಷ್ಟ ಹತ್ತರಷ್ಟು ಈ ಆರೋಗ್ಯ ಇಲಾಖೆಗೆ ಖರ್ಚುಮಾಡಬೇಕು ಎನ್ನುವ ವಾದವನ್ನು ಎಲ್ಲರೂ ಅಂಗೀಕರಿಸಿದ್ದಾರೆ. ನಾನಾದರೂ ಹೇಳುತ್ತೇನೆ ಆರೋಗ್ಯಕ್ಕೆ ಹೆಚ್ಚಿನ ಒಂದು ಪ್ರಾಶಸ್ತ್ಯ ನೀಡಬೇಕು, ಇಡೀ ದೇಶದ ಜನರ ಆರೋಗ್ಯ ಮಟ್ಟ ಉತ್ತಮವಾಗಬೇಕು. ಆರೋಗ್ಯದ ಮಟ್ಟ ಸುಧಾರಿಸಿದರೆ ಮಾತ್ರ ಎಲ್ಲ ಉತ್ಪನ್ನಗಳ ಕಾರ್ಯಗಳಿಗೆ ಹೆಚ್ಚು ಗಮನವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ನಾನು ಅರ್ಥ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ ದಯವಿಟ್ಟು ಆಯವ್ಯವನ್ನು ತಯಾರು ಮಾಡತಕ್ಕ ಸಂದರ್ಭದಲ್ಲಿ ಕನಿಷ್ಟ ಶ ಕಡಾ ಹತ್ತರಷ್ಟು ಹಣವನ್ನು ಆಯವ್ಯಯದಲ್ಲಿ, ಈ ಆರೋಗ್ಯ ಇಲಾಖೆಗೆ ಒದಗಿಸಿದರೆ ನಿಜವಾಗಿ ಗ್ರಾಮಾ ಮಟ್ಟದಲ್ಲಿ